ಹತ್ತಿತೋಟದ ಮರೆಯಲ್ಲಿ ನಿಂತಿದ್ದವಳು ಟ್ರಕ್ ಬಂದು ನಿಲ್ಲುತ್ತಿದ್ದಂತೆ ಚಕ್ಕನೆ ಹತ್ತಿಕೊಂಡಳು. ಸಾಬಣ್ಣನೊಂದಿಗೆ ಮತ್ತಷ್ಟು ಅಪರಿಚಿತ ಮುಖಗಳು ಕಾಣಿಸಿಕೊಂಡವು. ಆ ಮುಖಗಳ ಕಡೆ ಕಣ್ಣೆತ್ತಿ ನೋಡುವುದಿರಲಿ, ಯೋಚಿಸಲೂ ಹೋಗಲಿಲ್ಲ. ತಂದೆತಾಯಂದಿರ ಗುಂಗು ಇವಳೊಳಗೆ ಜೊಂಯ್ಯನೆ ಸುತ್ತುತ್ತಿತ್ತು, ಗಾಣದಂತೆ.

ಚೌಡಿಕೆ ಚನ್ನಮ್ಮ, ಕಾಲಿಗೆ ಕಚ್ಚಿದ ಚೇಳಿನ ವಿಷ ತೆಗೆಯುವಾಗ ಇವಳ ಜೀವವೇ ಹೋದಂತಾಗಿತ್ತು, ಅದು ಭೀಮವ್ವಳಿಗೆ ಕಚ್ಚಬೇಕಾಗಿತ್ತು! ಹೊರ ಬಿಚ್ಚಿದ್ದೇ ಹೇಗೆ ಚೇಳು ಮನೆಯನ್ನಾಕ್ರಮಿಸಿ ಎಲ್ಲರನ್ನೂ ಹೈರಾಣಾಗಿಸಿತ್ತು. ಅಂತಹಾ ಹೊತ್ತಿನಲ್ಲೇ ಹೈದರಾಬಾದ್‌ಗೆ ತನ್ನನ್ನು ಸಾಬಣ್ಣ ಕರೆದೊಯ್ಯುವ ಕುರಿತು ಹೇಳಿಬಿಡಬೇಕೆನಿಸಿತ್ತು, ಯಲ್ಲಾಲಿಂಗನ ಕ್ರೋಧದೆದುರಿಗೆ ಸೋತುಹೋಗಿದ್ದಳು. ಸಾಬಣ್ಣ ಎಂದಿನಂತೆ ಮುಖ ಕೊಟ್ಟು ಮಾತನಾಡುತ್ತಿರಲಿಲ್ಲ, ಕೊಂಚ ಒತ್ತಡದಲ್ಲಿದ್ದಂತೆ ಕಾಣುತ್ತಿತ್ತು. ದೂರದ ರಸ್ತೆಬದಿಯಲ್ಲಿ ಮತ್ತೊಂದಿಷ್ಟು ಹೆಣ್ಣುಮಕ್ಕಳು ನಿಂತಿದ್ದವು, ಟ್ರಕ್ ಅವರ ಬಳಿ ನಿಂತುಕೊಂಡಿತು. ಕ್ಲೀನರ್ ಕೆಳಗೆ ಜಿಗಿಯುತ್ತಲೇ, 'ಭೀಮವ್ವ ನೀನ್ ಹಿಂದೆ ಹತ್ಕಾ...' ಸಾಬಣ್ಣ ಮುಂದೆ ನೋಡುತ್ತಾ ಹೇಳಿದ. ಗಂಡಸರ ಮಧ್ಯೆ ಇವಳಿಗೂ ಕಸಿವಿಸಿಯಾಗಿತ್ತು, ಕೆಳಗಿಳಿದು ಹೋದಳು.

ಇದೆಂಥಾ ಮಬ್ಬುಗತ್ತಲು, ಯಾರಿಗ್ಯಾರೂ ಸಾವರಿಸಿಕೊಳ್ಳುತ್ತಿಲ್ಲ. ವಾಕರಿಕೆ ತರಿಸುವ ಬೆವರಿನ ವಾಸನೆ, ಜೋಮು ಹಿಡಿದ ಪಾದಗಳು. ಕ್ಯಾಬಿನ್ ಕಿಟಕಿ ಬಡಿದರೆ ಸಾಬಣ್ಣ ಕಾಣಬಹುದು, ಕಿಟಕಿ ಇರಲಿ, ಕ್ಯಾಬಿನ್ನೇ ಕಾಣುತ್ತಿಲ್ಲ. ಹೆಣ್ಣೋ ಗಂಡೋ ಮೃಗವೋ ಏನೊಂದು ಗೊತ್ತಾಗುತ್ತಿಲ್ಲ. ಕೈ ತಾಕಿದರೆ ಎತ್ತಿ ಎಸೆಯುವರು, ಪಾದ ತಾಕಿದರೆ ಕಾಲಿನಿಂದಲೇ ಒದೆಯುವರು. ಕಣ್ಣ ಮುಂದಿನದಕ್ಕೆ ಕೈ ನೀಡಿದರೆ ಹತ್ತಿ ದಾಸ್ತಾನು, ಅದೊಂದೇ ಮೆತ್ತನೆ ನಯವಾಗಿ ಜೀವ ಕಾಯುತ್ತಿತ್ತು. ಯಾವಾಗ ಜೊಂಪು ಹತ್ತಿತೋ ಗೊತ್ತಾಗಲಿಲ್ಲ, ಬೀದಿ ದೀಪದ ಬೆಳಕು ಟಾರ್ಪಾಲಿನ್ ಸಂದಿನಿಂದ ಭೀಮವ್ವಳ ಕಣ್ಣುಗಳನ್ನು ತಿವಿದಂತಾಗಿ ನಿಧಾನಕ್ಕೆ ಎಚ್ಚರಗೊಂಡಳು.

ಕೆಳಗಿಳಿಯುವಂತಿರಲಿಲ್ಲ, ಅಲ್ಲಿಂದಲ್ಲಿಗೆ ಎಲ್ಲವೂ ಸರಬರಾಜಾಗುತ್ತಿತ್ತು, ಟೀ, ಬನ್ನು, ಊಟ ಹೀಗೆ... ಮೂತ್ರಕ್ಕೆ ಹೋಗಬೇಕು, ಯಾರನ್ನು ಕೇಳುವುದು, ಇಳಿಯುವ ದಾರಿಯೇ ಮುಸುಕು. ದಡಬಡ, ದಡಬಡ... ದೊಡ್ಡ ದೊಡ್ಡ ಕಲ್ಲುಗಳೋ ಅಥವಾ ಉಬ್ಬುತಗ್ಗುಗಳೊಳಗೆ ಟ್ರಕ್ ಇಳಿದಾಡುತ್ತಿರಬೇಕು. ಇದು ಎಷ್ಟು ಹೊತ್ತು, ಹಿಂಸೆ... ಬಾಯಿಗೆ ಬಂದ ವಾಂತಿ ಹಾಗೆ ತುಳುಕಾಡಿಕೊಂಡು ಒಳಗೆ ಹೋಯಿತು. ಸುರಂಗದೊಳಗೆ ನುಸುಳಿರಬೇಕು ಟ್ರಕ್, ಮತ್ತೆಂದಿಗೂ ಹೊರಬರಲಾರದಂತೆ. ಏನೇನೋ ಕೆಟ್ಟ ಯೋಚನೆಗಳು... ಸಾಬಣ್ಣ ನಂಬಿಕಸ್ಥ, ಭೀಮವ್ವಳ ಮನೆಯಲ್ಲಿ ಅದೆಷ್ಟು ಸಲ ಹಬ್ಬದೂಟ ಸವಿದಿರುವನು, ಅದೆಷ್ಟು ಸಲ ಜೋಳದ ರೊಟ್ಟಿ ತಟ್ಟಿಸಿಕೊಂಡು ಹೋಗಿರುವನು. ಅನ್ನದ ಋಣ ತೀರಿಸುವ ಸಮಯವೆಂದರೆ ಇದೇ ಇರಬೇಕು.

ದಾರಿಮಧ್ಯೆ ಎಲ್ಲಿ ಟ್ರಕ್ ನಿಲ್ಲಿಸಿದ್ದರೋ ಗೊತ್ತಾಗಲಿಲ್ಲ, ಮಿರ್ಚಿ ಟೀ ಸೇವನೆಯಾಗಿತ್ತಷ್ಟೇ. ಗೋದಾಮಿನೊಳಗೆ ಟ್ರಕ್ ನಿಂತಿತ್ತು, ತನ್ನ ಸಂಗಡ ಇಷ್ಟೊಂದು ಹೆಣ್ಣುಗಳು ಪ್ರಯಾಣಿಸಿದ್ದರೆ? ಅಬ್ಬಬ್ಬಾ! ಭೀಮವ್ವ ಕುತೂಹಲಗೊಂಡಳು, ಬೆಳಕಾಡುತ್ತಲೇ. ಸಾಬಣ್ಣ ಕಾಣುತ್ತಿಲ್ಲ. ಹತ್ತಾರು ಹೆಣ್ಣುಗಳೊಂದಿಗೆ ಭೀಮ್ಮವ್ವ ಒಂಟಿಯಾಗಿ ನಿಂತಿದ್ದಳು. ಸಾಬಣ್ಣನೊಂದಿಗೆ ಕುಳಿತಿದ್ದ ಗಂಡಸು ಮತ್ತೊಬ್ಬ ಹಣವಂತ ಗಂಡಸಿನೊಂದಿಗೆ ಈ ಹೆಣ್ಣುಗಳನ್ನು ತೋರಿಸಿಕೊಂಡು ಚರ್ಚಿಸುತ್ತಿದ್ದ. ಬಹುಶಃ ಕೆಲಸದ ಹಂಚಿಕೆಯಿರಬೇಕು, ನಿಟ್ಟುಸಿರುಬಿಡುತ್ತಲೇ ಇದ್ದಳು, ಭೀಮವ್ವ. ಕಡೆಗೂ ಕಾಣದೆಹೋದನೆ, ಸಾಬಣ್ಣ; ತುಂಬಿದ ಕೊಡ ತುಳುಕುವುದಿಲ್ಲ ಅನ್ನುವಂತೆ. ಟ್ರ್ಯಾಕ್ಸ್ ಜೀಪಿನಲ್ಲಿ ಈ ಎಲ್ಲ ಹೆಣ್ಣುಗಳನ್ನು ತುಂಬಿಸಿಕೊಂಡರು, ಉರ್ದುಮಿಶ್ರಿತ ತೆಲುಗಿನಲ್ಲಿ ವ್ಯವಹಾರ. ಭೀಮವ್ವಳಿಗೇನೂ ಹೊಸತಲ್ಲ, ಅರ್ಥೈಸಿಕೊಳ್ಳಬಲ್ಲಳು. ಗೋಲ್ಕಂಡದ ತಿರುವು ಬಿಟ್ಟು ನಗರದೊಳಗೆ ಪ್ರವೇಶ, ಗಿಜಿಗಿಡುವ ಜನಸಂದಣಿ. ಬಣ್ಣ, ಮಣ್ಣು ಮತ್ತು ಇಟ್ಟಿಗೆಗಳು ಕಿತ್ತುಕೊಂಡು ಕುಸಿದುಬೀಳುವಂತಿರೋ ಲಾಡ್ಜ್ ಮುಂದೆ ಜೀಪು ನಿಂತಿತು. ಯಾರು ಯಾರೊಂದಿಗೂ ಮಾತಿಲ್ಲ, ಎಲ್ಲವೂ ನಿಶ್ಶಬ್ದ. ಎಲ್ಲರನ್ನೂ ಒಳಗೆ ಕರೆದೊಯ್ದರು, ಆಗಷ್ಟೇ ಬೆಳಕಿನಿಂದ ಕಳೆಗುಂದುತ್ತಿದ್ದ ಕೋಣೆಯೊಳಗೆ ಇವರೆಲ್ಲರನ್ನೂ ದೂಡಿದರು.

ಹಗಲು ಸಂಜೆಗಳು ಕಳೆದವು, ಯಾರ್ಯಾರನ್ನು